ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

ಸಿ.ಸಿ. ಸಂಖ್ಯೆಃ **972/2025**

ಪಿರ್ಯಾದಿ: ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್ ಠಾಣೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿತರು:

**1.** ಶ್ರೀನಾಥ್.ಎಸ್.ಎಂ,
ವಯಸ್ಸು ಸುಮಾರು 44 ವರ್ಷ,
ಬಿನ್ ಎಸ್.ಟಿ. ಮಂಜುನಾಥ್ ಗೌಡ.

**2.** ಎಸ್.ಟಿ.ಮಂಜುನಾಥ್,
ವಯಸ್ಸು ಸುಮಾರು 72 ವರ್ಷ,
ಬಿನ್ ತಿಮ್ಮೇಗೌಡ.

ಇಬ್ಬರ ವಾಸಃ ಹೌಸಿಂಗ್ ಬೋರ್ಡ್,
ಮೂಡಿಗೆರೆ ತಾಲ್ಲೂಕು.

ದೋಷಾರೋಪಣೆ

ಶ್ರೀಮತಿ ಸುರಕ್ಷ ಕೆ.ಕೆ., C/c ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆಃ-

ದಿನಾಂಕ 01.12.2024 ರಂದು ಬೆಳಗ್ಗೆ 11.00 ರ ಸಮಯದಲ್ಲಿ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಚಾಸಾ1-ವರುಣ್ ಗೋಪಾಲ್ ರವರ ಮಾಲೀಕತ್ವದ ನಡುವಿನ ಮಾಕ್ಕಲ್ ಗ್ರಾಮದ ಸರ್ವೆ ನಂ.71 ಕಾಫೀ ತೋಟದಲ್ಲಿ ಚಾಸಾ1 ರವರು, ಚಾಸಾ3-ಮೋಹನ್, ಚಾಸಾ4-ನಾಗರಾಜ್, ಚಾಸಾ5-ಶಶಿಕಲಾ, ಚಾಸಾ6-ಸದಾನಂದ, ಚಾಸಾ7-ಭಾಮಾ, ಚಾಸಾ8-ಅನು ಮತ್ತು ಚಾಸಾ9-ಹೊನ್ನೇಶ ರವರೊಂದಿಗೆ ಅಡಿಕೆ ಮರದಿಂದ ಗೊನೆಗಳನ್ನು ತೆಗೆಯಿಸಿ ಒಟ್ಟುಗೂಡಿಸುತ್ತಿದ್ದಾಗ, ಆರೋಪಿತರುಗಳಾದ ನೀವುಗಳು ಸಮಾನ ಉದ್ದೇಶದಿಂದ ಕೆಎ-18-ಸಿ-8177 ನೇ ಮಹೇಂದ್ರ ಬೊಲೇರೋ ಕಂಪನಿಯ ಪಿಕಪ್ ವಾಹನದಲ್ಲಿ ಬಂದು ಕಡೇಮಾಡ್ಕಲ್-ಮೂಡಿಗೆರೆ ರಸ್ತೆ ಬದಿಯಲ್ಲಿ ವಾಹನವನ್ನು ನಿಲ್ಲಿಸಿ, ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಪ್ಲಾಸ್ಟಿಕ್ ಪೈಪ್ ಹಾಗೂ 2 ನೇ ಆರೋಪಿಯಾದ ನೀವು ಮರದ ಕೋಲನ್ನು ಕೈಯಲ್ಲಿ ಹಿಡಿದುಕೊಂಡು ಪಿಕಪ್ ವಾಹನದಿಂದ ಇಳಿದು ಚಾಸಾ1 ರವರ ಕಾಫೀ ತೋಟಕ್ಕೆ ಅತಿಕ್ರಮ ಪ್ರವೇಶವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ

ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ **329(3)** ಸಹಕಲಂ **3(5)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ಯಾವನೋ ಅಡಿಕೆಯನ್ನು ತೆಗೆಸುತ್ತಿರುವುದು, ಈ ಜಾಗಕ್ಕೆ ನಾವು ಲಕ್ಷಗಟ್ಟಲೆ ಹಣ ಹಾಕಿದ್ದೇವೆ ಸೂಳೇಮಕ್ಕಳಾ, ಬೋಳಿಮಕ್ಕಳಾ ಎಂದು ಆವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **352** ಸಹಕಲಂ **3(5)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ಆಗ ಚಾಸಾ1 ರವರು ನಿಮ್ಮೊಂದಿಗೆ ಸಮಾಧಾನವಾಗಿ ಮಾತನಾಡುತ್ತಾ ತೋಟದಿಂದ ಮೂಡಿಗೆರೆ-ಕಡೇಮಾಡ್ಕಲ್ ಠಾರು ರಸ್ತೆಗೆ ಬಂದಾಗ, ನೀವುಗಳು ಚಾಸಾ1 ರವರನ್ನು ಹಿಂಬಾಲಿಸಿಕೊಂಡು ರಸ್ತೆಗೆ ಬಂದು ಅವರೊಂದಿಗೆ ಚಾಸಾ3 ರಿಂದ 9 ರವರೂ ಸಹ ರಸ್ತೆಗೆ ಬಂದಾಗ, ಅದೇ ಸಮಯಕ್ಕೆ ಚಾಸಾ11-ಸಂದೇಶ್ ರವರು ಅಲ್ಲಿಗೆ ಬಂದು ಗಲಾಟೆಯನ್ನು ನೋಡಿ ಸಮಾಧಾನವಾಗಿ ಕುಳಿತುಕೂಂಡು ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ ಎಂದು ನಿಮಗೆ ಹಾಗೂ ಚಾಸಾ1 ರವರಿಗೆ ತಿಳಿಹೇಳಿದರೂ ಸಹ ನೀವುಗಳು ಕೇಳದೆ, ನಮಗೆ ಬುದ್ಧಿ ಹೇಳುತ್ತೀಯಾ ಎಂದು ನಿಮ್ಮ ಪೈಕಿ 1 ನೇ ಆರೋಪಿ ಚಾಸಾ1 ರವರಿಗೆ ಪ್ಲಾಸ್ಟಿಕ್ ಪೈಪ್ ನಿಂದ ಹಾಗೂ 2 ನೇ ಆರೋಪಿಯಾದ ನೀವು ಚಾಸಾ1 ರವರಿಗೆ ಮರದ ಕೋಲಿನಿಂದ ಎರಡೂ ಕಾಲಿಗೆ, ತೊಡೆಗೆ ಹಾಗೂ ಕುಂಡೆಯ ಹತ್ತಿರ ಹೊಡೆದಿದ್ದು, ಬಿಡಿಸಲು ಬಂದ ಚಾಸಾ4 ರವರಿಗೂ ಸಹ ತೊಡೆಗೆ, ಮೊಣಕೈಗೆ, ಕುಂಡೆಗೆ ಮತ್ತು ಕಾಲಿಗೆ ಪೆಟ್ಟು ಬಿದ್ದಿದ್ದು, ಇದನ್ನು ನೋಡಿ ಚಾಸಾ6 ರವರೂ ಸಹ ಸಮಾಧಾನ ಮಾಡಲು ಹೋದಾಗ, 1 ನೇ ಆರೋಪಿಯಾದ ನೀವು ಚಾಸಾ6 ರವರ ಕುತ್ತಿಗೆಯನ್ನು ಹಿಡಿದುಕೊಂಡಿದ್ದು, ಕೂಡಲೇ ಚಾಸಾ5 ರವರು ಬಿಡಿಸಲು ಹೋದಾಗ, ಅವರನ್ನೂ ಸಹ ಜೋರಾಗಿ ತಳ್ಳಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ **118(1)** ಸಹಕಲಂ **3(5)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಚಾಸಾ1 ರವರಿಗೆ

ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ, ಇನ್ನು ಮುಂದೆ ಈ ಜಾಗದ ತಂಟೆಗೆ ಬಂದರೆ ನಿಮ್ಮನ್ನು ಹಾಗೂ ನಿಮ್ಮ ಕುಟುಂಬದವರನ್ನು ಕತ್ತಿಯಿಂದ ಕತ್ತರಿಸಿ ಬಿಸಾಕುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ **351(3)** ಸಹಕಲಂ **3(5)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿತರ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿತರ ಉತ್ತರಃ

*(ದಿನಾಂಕ 23.01.2026 ರಂದು ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ)*

**Sd/-**

ಮೂಡಿಗೆರೆ
ದಿನಾಂಕಃ 23.01.2026

*C/c* ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.